# ಟೀವಿ ತಾರೆಯ ದರೋಡೆ

ಅಮೆರಿಕದ ಅಧ್ಯಕ್ಷ ಚುನಾವಣೆಯ ಪ್ರಚಾರ ಉತ್ತುಂಗ ತಲುಪಿರುವ ಈ ಹೊತ್ತಲ್ಲೇ ಅದಕ್ಕಿಂತ ದೊಡ್ಡ ಸುದ್ದಿ ಮಾಡಿದಾಕೆ ಈ ಕಿಮ್ ಕರಿದಶಿಯನ್. ಅಮೆರಿಕದ ಫ್ಯಾಷನ್, ಮಾಡೆಲಿಂಗ್ ಮತ್ತು ಟೀವಿ ಲೋಕದಲ್ಲಿ ಸೂಪರ್‌ಸ್ಟಾರ್ ಆಗಿರುವ ಕಿಮ್ ಸುದ್ದಿಯಾದದ್ದು ಮಾತ್ರ ಸಂಭ್ರಮದ ಕಾರಣಕ್ಕೆ ಅಲ್ಲ; ದುಃಖದ ಕಾರಣಕ್ಕೆ. ಪ್ಯಾರಿಸ್‌ನಲ್ಲಿ ತನ್ನ ಸ್ವಂತ ಹೋಟೆಲ್ಲಿನ ಎರಡನೇ ಮಹಡಿಯಲ್ಲಿ ಕಿಮ್ ಮಲಗಿದ್ದ ಕೋಣೆಗೆ ಇಬ್ಬರು ಮುಸುಕುಧಾರಿಗಳು ನುಗ್ಗಿದರಂತೆ. ಬಂದೂಕು ತೋರಿಸಿ ಕಿಮ್‌ಳ ಕೈಕಾಲು ಕಟ್ಟಿ ಬಾತ್‌ರೂಮ್‌ನಲ್ಲಿ ಕೂಡಿ ಹಾಕಿ ಕೋಣೆಯಲ್ಲಿದ್ದ ಭಾರೀ ಬೆಲೆ ಬಾಳುವ ಆಭರಣಗಳನ್ನು ಕದ್ದೊಯ್ದರಂತೆ. ಹಾಗೆ ಕಳವಾದ ಆಭರಣಗಳ ಒಟ್ಟು ಮೊತ್ತ 67 ಲಕ್ಷ ಅಮೆರಿಕನ್ ಡಾಲರ್! ಅದರಲ್ಲೂ ಕಿಮ್ ಸದಾ ಧರಿಸುತ್ತಿದ್ದ ಒಂದು ವಜ್ರದ ರಿಂಗ್ ಬೆಲೆಯೇ 40 ಲಕ್ಷ ಡಾಲರ್! ಜತೆಗೆ ಕಿಮ್ ಬಳಸುತ್ತಿದ್ದ 2 ದುಬಾರಿ ಮೊಬೈಲ್ ಫೋನ್‌ಗಳನ್ನೂ ಕಳ್ಳರು ಕೊಂಡು ಹೋಗಿದ್ದಾರೆ. ಈ ಮೊಬೈಲ್‌ನಲ್ಲಿ ಕಿಮ್ ಗೆ ಸಂಬಂಧಿಸಿದ ಹಲವು ರಹಸ್ಯ ಮಾಹಿತಿಗಳು ಇವೆಯಂತೆ!

ಕಳೆದ ವಾರವಿಡೀ ಸಾಮಾಜಿಕ ಜಾಲತಾಣಗಳಲ್ಲಿ ಈ ಸುದ್ದಿಯದ್ದೇ ಚರ್ಚೆ. ಸದ್ಯಕ್ಕೆ ಅಮೆರಿಕದ ಟೀವಿ ರಿಯಾಲಿಟಿ ಶೋ ಗಳಲ್ಲಿ ಅತ್ಯಧಿಕ ಸಂಭಾವನೆ ಪಡೆಯುವ ನಟಿ ಈಕೆ. 2015ರಲ್ಲಿ ಈಕೆಯ ಗಳಿಕೆ 520 ಲಕ್ಷ ಡಾಲರ್ ಎನ್ನುವುದು ಒಂದು ಅಂದಾಜು. 35ರ ಹರೆಯದ ಇಬ್ಬರು ಮಕ್ಕಳ ತಾಯಿ ಕಿಮ್ ಈ ಘಟನೆಯಿಂದ ದಿಗ್ಭ್ರಾಂತಿಗೆ ಒಳಗಾಗಿದ್ದಾಳೆ. ಕೇವಲ ಆರು ನಿಮಿಷಗಳಲ್ಲಿ ದರೋಡೆಕೋರರು ಲೂಟಿಗೈದು ಪರಾರಿಯಾಗಿದ್ದಾರೆ. ಕೆಳಗಿನ ಮಹಡಿಯಲ್ಲಿದ್ದ ಈಕೆಯ ಗೆಳತಿಯೊಬ್ಬಳು ಗಲಾಟೆ ಕೇಳಿ ಮೇಲೆ ಬಂದು ನೋಡಿದ್ದಾಳೆ. ಬಳಿಕ ಪೊಲೀಸರಿಗೆ ದೂರು ಹೋಗಿದೆ.



ಗಾಬರಿಗೊಂಡ ಕಿಮ್ ಬೆಳಿಗ್ಗೆ ಸೂರ್ಯ ಹುಟ್ಟುವುದರೊಳಗೇ ತನ್ನ ಖಾಸಗಿ ವಿಮಾನ ಹತ್ತಿ ನ್ಯೂಯಾರ್ಕ್‌ಗೆ ಹೊರಟುಹೋಗಿದ್ದಾಳೆ. ಅಲ್ಲಿ (ಮೂರನೆಯ) ಗಂಡ ಕೇಯ್ನ್ ವೆಸ್ಟ್ ಜತೆಗೆ ದುಃಖ ಹಂಚಿಕೊಂಡಿದ್ದಾಳೆ.

ದೊಡ್ಡವರ ದುಃಖ ದೊಡ್ಡ ವಿವಾದವೇ ಆಗುವುದು ಹೆಚ್ಚು. ಕಿಮ್ ದರೋಡೆ ಸುದ್ದಿ ಕೂಡಾ ಈಗ ಹಾಗೆಯೇ ಆಗಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಸದಾ ಸ್ಟೈಲ್ ಆಗಿ ಕಾಣಿಸಿಕೊಳ್ಳುವ ಕಿಮ್, ತನ್ನ ಗಂಡ ಕೊಡಿಸಿದ್ದ 40 ಲಕ್ಷ ಡಾಲರ್ ಬೆಲೆಯ ವಜ್ರದ ಉಂಗುರವನ್ನು ಸಾಕಷ್ಟು ಬಾರಿ ಪ್ರದರ್ಶಿಸಿ, ಅದರ ಬಗ್ಗೆ ಟೀವಿ ರಿಯಾಲಿಟಿ ಶೋಗಳಲ್ಲಿ ಗಂಟೆಗಟ್ಟಳೆ ಮಾತನಾಡಿದ್ದೂ ಇದೆ. 'ಹಾಗೆ ಮಾಡಿದ್ದು ತಪ್ಪು ಎಂದೀಗ ಅರಿವಾಗಿದೆ' ಎಂದಿದ್ದಾಳೆ ಕಿಮ್. ಅಂದ ಹಾಗೆ ಕೋಣೆಗೆ ನುಗ್ಗಿದ ಕಳ್ಳರು ಮೊದಲು 'ರಿಂಗ್ ಎಲ್ಲಿ.. ರಿಂಗ್ ಎಲ್ಲಿ..?' ಎಂದೇ ಕೂಗಾಡಿದರಂತೆ! 'ಚಿಂತಿಸದಿರು, ಅಂತಹದ್ದೇ ಇನ್ನೊಂದು ರಿಂಗ್ ಕೊಡಿಸುತ್ತೇನೆ' ಎಂದು ಗಂಡ ಹೇಳಿದ್ದರೂ ಆಕೆಯ ದುಃಖ ಶಮನವಾಗಿಲ್ಲ.

ಆದರೆ ಈ ದರೋಡೆಯ 'ರಿಯಾಲಿಟಿ'ಯ ಬಗ್ಗೆಯೇ ಈಗ ಹಲವರು ಪ್ರಶ್ನೆಗಳನ್ನು ಎತ್ತುತ್ತಿದ್ದಾರೆ. 'ಅಷ್ಟು ದೊಡ್ಡ ಹೋಟೆಲ್ಲಿನಲ್ಲಿ ಭದ್ರತಾ ಪಡೆಯವರು ಇರಲಿಲ್ಲವೆ? ಕಿಮ್‌ನ ಖಾಸಗಿ ಅಂಗರಕ್ಷಕ ಎಲ್ಲಿ ಹೋಗಿದ್ದ? ಯಾರೂ ಅಂಗರಕ್ಷಕರು ಇಲ್ಲ ಎನ್ನುವುದು ಆ ಕಳ್ಳರಿಗೆ ಹೇಗೆ ಗೊತ್ತಾಯ್ತು? ಹೋಗಲಿ, ಅಷ್ಟು ದೊಡ್ಡ ಹೋಟೆಲಲ್ಲಿ ಭದ್ರತೆಗೆ ಕ್ಯಾಮೆರಾಗಳನ್ನು ಅಳವಡಿಸಿಲ್ಲ ಎಂದರೆ ನಂಬುವುದು ಹೇಗೆ?' ಎಂದು ಹಲವರು ಪ್ರಶ್ನೆ ಕೇಳುತ್ತಿದ್ದಾರೆ. ಘಟನೆ ನಡೆದದ್ದು ಬೆಳಿಗ್ಗೆಯ ಜಾವ 3 ಗಂಟೆಗೆ. ಆ ಹೊತ್ತಲ್ಲಿ ಖಾಸಗಿ ಅಂಗರಕ್ಷಕ ಪಾಸ್ಕಲ್, ಆಕೆಯ ತಂಗಿಯರ ಜತೆಗೆ ನೈಟ್‌ಕ್ಲಬ್‌ನಲ್ಲಿ ಇದ್ದನಂತೆ. ಸುದ್ದಿ ತಿಳಿದ ತಕ್ಷಣ ಸ್ಥಳಕ್ಕೆ ಧಾವಿಸಿದರೂ ಅಷ್ಟು ಹೊತ್ತಿಗೆ ಕಳ್ಳರು ಪರಾರಿ ಆಗಿದ್ದರಂತೆ.

"ಅಕ್ಟೋಬರ್ 23ರಂದು ಕಿಮ್‌ಳ ಹೊಸ ರಿಯಾಲಿಟಿ ಶೋ 'ಕೀಪಿಂಗ್ ಅಪ್ ವಿದ್ ದಿ ಕರ್‌ದಶಿಯನ್ಸ್' ಆರಂಭವಾಗಲಿದೆ. ಅದರ ಪ್ರಚಾರಕ್ಕೆ ಈ ತಂತ್ರ" ಎಂದು ಕೆಲವರು ನೇರ ಆರೋಪ ಮಾಡಿದ್ದಾರೆ. ಆದರೆ ಪ್ರಚಾರಕ್ಕೆ ಇದಕ್ಕಿಂತ ಹಲವು ಸುಲಭ ದಾರಿಗಳು ಕಿಮ್‌ಗೆ ಇವೆ ಎನ್ನುವುದೂ ನಿಜವೇ. ಫ್ಯಾಷನ್ ಶೋನಲ್ಲಿ ಬಟ್ಟೆ ಜಾರಿದರೂ ಇದಕ್ಕಿಂತ ದೊಡ್ಡ ಪ್ರಚಾರ ಸಿಗುತ್ತದೆ. ಕಿಮ್ ಪ್ರವರ್ಧಮಾನಕ್ಕೆ ಬಂದದ್ದೇ ಇಂತಹ ಗಿಮಿಕ್‌ಗಳಿಂದ. ಆರಂಭದಲ್ಲಿ ಉದ್ಯಮಿ, ಸೋಶಲೈಟ್ ಪ್ಯಾರಿಸ್ ಹಿಲ್ಟನ್‌ಳ ಗೆಳತಿ ಹಾಗೂ ಸ್ಟೈಲಿಸ್ಟ್ ಆಗಿದ್ದ ಕಿಮ್, 2007ರಲ್ಲಿ ಬಾಯ್‌ಫ್ರೆಂಡ್ ಜತೆಗಿನ ಸೆಕ್ಸ್‌ಟೇಪ್ ಲೀಕ್ ಆದದ್ದರಿಂದಲೇ ಪ್ರಚಾರಕ್ಕೆ ಬಂದಾಕೆ. ಈಗಂತೂ ಈಕೆಗೆ ಪ್ರಚಾರ ಕೊರತೆಯಿಲ್ಲ. ಕೋಟ್ಯಂತರ ಅಭಿಮಾನಿಗಳನ್ನು ಹೊಂದಿ 'ಇನ್‌ಸ್ಟಾಗ್ರಾಮ್'ನಲ್ಲಿ ಟಾಪ್ ಟೆನ್ ಪಟ್ಟಿಯಲ್ಲಿರುವ; ಟೈಮ್ ಮ್ಯಾಗಸಿನ್‌ನ ಜಗತ್ತಿನ 100 ಪ್ರಭಾವಶಾಲಿ ವ್ಯಕ್ತಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಕಿಮ್, ಜುಜುಬಿ ಪ್ರಚಾರಕ್ಕಾಗಿ ದರೋಡೆಯ ಸುಳ್ಳು ಸುದ್ದಿ ಹರಡಿದ್ದಾಳೆ ಎನ್ನುವುದನ್ನು ಅಭಿಮಾನಿಗಳು ನಂಬುತ್ತಿಲ್ಲ. ಅಮೆರಿಕನ್ ಟೀವಿ ರಿಯಾಲಿಟಿ ಶೋ ಮತ್ತು ಟೀವಿ ಧಾರವಾಹಿಗಳಲ್ಲಿ ಅತ್ಯಧಿಕ ಜನಪ್ರಿಯತೆ ಪಡೆದಿರುವ ಕಿಮ್ ಮೂರು ಹಾಲಿವುಡ್ ಸಿನಿಮಾಗಳಲ್ಲಿ ನಟಿಸಿದ್ದು, ನಾಲ್ಕು ಮ್ಯೂಸಿಕ್ ಆಲ್ಬಂಗಳೂ ಬಿಡುಗಡೆಯಾಗಿವೆ. ಅದೆಲ್ಲಕ್ಕಿಂತ ಹೆಚ್ಚು ಪ್ರಚಾರ ಈಗ ದರೋಡೆಯಿಂದ ಲಭಿಸಿದೆ!

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65